ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

(ಅ) ಹೌದು.

(ಆ) ಇಲ್ಲ.

(ಇ) ವಿಲೀನಕರಣವಾಗಿದ್ದರೂ ಸಂಘದ ಲೆಕ್ಕ ಪತ್ರಗಳನ್ನು ಕೊಡದೆ ಇದ್ದುದರಿಂದ ಸದರಿ ಕಾರ್ಯನಿರ್ವಹಣಾಧಿಕಾರಿಯವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ. ಕೂಡಲೇ ಸಂಘದ ಅಧ್ಯಕ್ಷರು ರಾಜ್ಯದ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ದಾಖಲು ಮಾಡಿ ವಿಲೀನೀಕರಣವಾಗಿರುವುದಕ್ಕೆ ತಡೆಯಾಜ್ಞೆಯನ್ನು ಪಡೆದುಕೊಂಡರು, ರಾಜ್ಯದ ಉಚ್ಚನ್ಯಾಯಾಲಯದಲ್ಲಿ ದಾಖಲಾಗಿದ್ದ ರಿಟ್ ಅರ್ಜಿ ವಜಾ ಆದ ಮೇಲೆ ಇಲಾಖೆಯ ಅಧಿಕಾರಿಗಳು ಸಂಘದ ಲೆಕ್ಕ ಪತ್ರಗಳನ್ನು ತೆಗೆದುಕೊಳ್ಳಲು ಪ್ರಯತ್ನಿಸಿದರು. ಇದಕ್ಕೆ ಕಾರ್ಯದರ್ಶಿಗಳು ಮನ್ನಣೆ ಕೊಡದಿದ್ದುದರಿಂದ ಸಹಕಾರ ಸಂಘಗಳ ತಿದ್ದುಪಡಿಯಾದ ಕಾನೂನು ಕಲಂ ನಂ. ೧೦೯ರ ಪ್ರಕಾರ ಸದರಿ ಕಾರ್ಯದರ್ಶಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶಿವಮೊಗ್ಗದ ತುಂಗಭದ್ರಾ ಸಕ್ಕರೆ ಕಾರ್ಖಾನೆಗೆ ಜಮೀನು

೩೮೦. ಶ್ರೀ ಕೆ. ಎಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಕಂದಾಯ ಹಾಗೂ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) ಶಿವಮೊಗ್ಗದಲ್ಲಿ ತುಂಗಭದ್ರಾ ಸಕ್ಕರೆ ಕಾರ್ಖಾನೆಗೆ ಗುತ್ತಿಗೆಗೆ ಮಂಜೂರಾದ ಒಟ್ಟು ಕಂದಾಯ ಜಮೀನಿನ ವಿಸ್ತೀರ್ಣವೆಷ್ಟು ?

(ಆ) ಗುತ್ತಿಗೆಗೆ ಮಂಜೂರಾದ ಜಮೀನುಗಳ ಸರ್ವೇ ನಂಬರುಗಳು, ಗ್ರಾಮಗಳು ಮತ್ತು ವಿಸ್ತೀರ್ಣವೆಷ್ಟು ?

(ಇ) ಗುತ್ತಿಗೆಗೆ ನೀಡಿದ ವಾಯಿದೆ ಮತ್ತು ಪರತ್ತುಗಳೇನು ?

(ಈ) ಸದರೀ ಜಮೀನಿನಲ್ಲಿ ಕಾರ್ಖಾನೆಯಿಂದ ಖಾಯಂ ಆಗಿ ನೇಮಿಸಲ್ಪಟ್ಟ ಕಾರ್ಮಿಕರ ಸಂಖ್ಯೆ ?

(ಉ) ಗುತ್ತಿಗೆ ಕರಾರು ಮುಗಿದ ನಂತರ ಸರ್ಕಾರ ಈ ಜಮೀನುಗಳನ್ನು ಕಾರ್ಖಾನೆ ಕೆಲಸಗಾರರಿಗೆ ಹಂಚಲು ಕ್ರಮ ಕೈಗೊಳ್ಳುವುದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಸಚಿವರು).—

(ಅ) ಶಿವಮೊಗ್ಗ ಜಿಲ್ಲೆಯಲ್ಲಿ ತುಂಗಭದ್ರಾ ಸಕ್ಕರೆ ಕಾರ್ಖಾನೆಗೆ ಗುತ್ತಿಗೆಯ ಮೇಲೆ ಒಟ್ಟು ೬೫೯ ಎಕರೆ ೧೧ ಗುಂಟೆ ಸರ್ಕಾರಿ ಕಂದಾಯ ಜಮೀನನ್ನು ನೀಡಲಾಗಿದೆ.

(ಆ) ತುಂಗಭದ್ರಾ ಸಕ್ಕರೆ ಕಾರ್ಖಾನೆಗೆ ಗುತ್ತಿಗೆಗೆ ನೀಡಲಾದ ಜಮೀನುಗಳ ವಿಸ್ತೀರ್ಣ, ಸರ್ವೆ ನಂಬರುಗಳು, ಗ್ರಾಮಗಳ ಹೆಸರು ಮತ್ತು ತಾಲ್ಲೂಕುಗಳ ವಿವರ ಈ ಕೆಳಕಂಡಂತಿದೆ.

ತಾಲ್ಲೂಕು	ಗ್ರಾಮ	ಸರ್ವೆ ನಂ.	ವಿಸ್ತೀರ್ಣ
ಭದ್ರಾವತಿ	ಕಾರೇಹಳ್ಳಿ	೮	೨೨೫–೦೦
ಭದ್ರಾವತಿ	ಕಾರೇಹಳ್ಳಿ	೨೨	೩೨–೧೧
ಶಿವಮೊಗ್ಗ	ಹೊಸೂಡಿ	೧೩೫	೨೫೨–೦೦
ಶಿವಮೊಗ್ಗ	ಹಾಲಕ್ಕವಳ್ಳಿ	೨೨–೩೬	೧೫೦–೦೦
		ಒಟ್ಟು	೬೫೯–೧೧

(೧)ಗುತ್ತಿಗೆ ವಾಯಿದೆ ಮತ್ತು ಪರತ್ತುಗಳು ಈ ಕೆಳಕಂಡಂತಿದೆ.

೧ ಗುತ್ತಿಗೆಯ ವಾಯಿದೆ ೩೦ ವರ್ಷಗಳು
೨ ಮೊದಲನೆ ೫ ವರ್ಷಗಳ ಬಾಡಿಗೆ ಪ್ರತಿ ಎಕರೆಗೆ ಪ್ರತಿ ವರ್ಷಗೆ ರೂ. ೫-೦೦
೩ ೬ನೇ ವರ್ಷದ ಬಾಡಿಗೆ ಪ್ರತಿ ಎಕರೆಗೆ ಪ್ರತಿ ವರ್ಷಕ್ಕೆ ರೂ. ೫೦-೦೦
೪ ೭ನೇ ವರ್ಷದ ಬಾಡಿಗೆ ಪ್ರತಿ ಎಕರೆಗೆ ಪ್ರತಿ ವರ್ಷಕ್ಕೆ ರೂ. ೬೦-೦೦
೫ ೮ನೇ ವರ್ಷದ ಬಾಡಿಗೆ ಪ್ರತಿ ಎಕರೆಗೆ ಪ್ರತಿ ವರ್ಷಕ್ಕೆ ರೂ. ೭೦-೦೦
೬ ೯ನೇ ವರ್ಷದ ಬಾಡಿಗೆ ಪ್ರತಿ ಎಕರೆಗೆ ಪ್ರತಿ ವರ್ಷಕ್ಕೆ ರೂ. ೮೦-೦೦
೭ ೧೦ನೇ ವರ್ಷದ ಬಾಡಿಗೆ ಪ್ರತಿ ಎಕರೆಗೆ ಪ್ರತಿ ವರ್ಷಕ್ಕೆ ರೂ. ೯೦-೦೦
೮ ೧೧ನೇ ವರ್ಷದ ಬಾಡಿಗೆ ಪ್ರತಿ ಎಕರೆಗೆ ಪ್ರತಿ ವರ್ಷಕ್ಕೆ ರೂ. ೧೧೦-೦೦

ಮೇಲ್ಕಂಡ ಗುತ್ತಿಗೆ ಹಣದ ಜೊತೆಗೆ ಕಾಲ ಕಾಲಕ್ಕೆ ವಿಧಿಸುವ ನೀರಿನ ಕರ ಮತ್ತು ಇತರೆ ಕರಗಳನ್ನೊಳಗೊಂಡಿರುತ್ತದೆ.

(ಈ) ೧೧೦ ವಂಂದಿ.

(ಉ) ಕಾರ್ಖಾನೆ ಕೆಲಸಗಾರರಿಗೆ ಜಮೀನನ್ನು ಹಂಚುವ ಪ್ರಶ್ನೆ ಸದ್ಯಕ್ಕೆ ಉದ್ಭವಿಸುವುದಿಲ್ಲ.

ಹೊಸದುರ್ಗ ತಾಲ್ಲೂಕಿನ ಶ್ರೀ ಹಾಲು ರಾಮೇಶ್ವರ ಯಾತ್ರಾ ಸ್ಥಳದ ಜೀರ್ಣೋದ್ಧಾರ

೬೭. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಹೊಸದುರ್ಗ ತಾಲ್ಲೂಕು ಶ್ರೀ ಹಾಲು ರಾಮೇಶ್ವರ ಕ್ಷೇತ್ರದ ಜೀರ್ಣೋದ್ಧಾರದ ಬಗ್ಗೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ ?

(ಆ) ಹಾಗಿದ್ದಲ್ಲಿ ಸರ್ಕಾರದವರಿಗೆ ಕ್ಷೇತ್ರದಿಂದ ಇದುವರೆವಿಗೆ ಎಷ್ಟು ಹಣ ಆದಾಯ ಬಂದಿದೆ ?

(ಇ) ಈ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಕ್ರಮ ಕೈಗೊಳ್ಳಲು ತೀರ್ಮಾನಿಸಲಾಗಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು).—

(ಅ) ಮೊದಲನೆಯ ಹಂತದಲ್ಲಿ ಈ ಕೆಳಗೆ ನಮೂದಿಸಿದ ಅಭಿವೃದ್ಧಿ ಕಾರ್ಯಗಳನ್ನು ತೆಗೆದು ಕೊಳ್ಳಲು ಪ್ಲಾನ್ ಮತ್ತು ಎಸ್ಟಿಮೇಟು ತಯಾರಿಸಿ ತಾಂತ್ರಿಕ ಮಂಜೂರಾತಿ ನಿರೀಕ್ಷಿಸಲಾಗುತ್ತಿದೆ. ಅಂದಾಜು ವೆಚ್ಚ ೨೨,೭೦೦-೦೦ ರೂಪಾಯಿ.

೧. ದೇವಸ್ಥಾನದ ಕೊತಡಿಗಳ ದುರಸ್ತಿ.

೨. ದೇವಸ್ಥಾನದ ಕೊಳದ ಕಲ್ಲುಗಳ ಜೋಡಣೆ ಮತ್ತು ರಿಪೇರಿ.

(ಆ) ವರ್ಷಕ್ಕೆ ಸುಮಾರು ೧೮,೦೦೦-೦೦ ರೂ. ಉತ್ಪತ್ತಿ ಇದ್ದು, ಇದು ಆ ದೇವಸ್ಥಾನದ ನಿಧಿಗೆ ಜಮಾ ಆಗುತ್ತದೆ. ಸರ್ಕಾರದ ಲೆಕ್ಕಕ್ಕೆ ಜಮಾ ಆಗುವುದಿಲ್ಲ.

(ಇ) ಮೊದಲನೆ ಪ್ರಶ್ನೆಗೆ ಕೊಟ್ಟಿರುವ ಉತ್ತರ ಇದಕ್ಕೂ ಅನ್ವಯಿಸುತ್ತದೆ.

ರಾಜ್ಯದಲ್ಲಿ ನೀರಾವರಿ ಬಾವಿ ಹಾಗೂ ಕೊಳವೆ ಬಾವಿಗಳಿಗೆ ವಿದ್ಯುತ್ ಪೂರೈಕೆ.

೬೭. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ವಿದ್ಯುತ್‌ಚ್ಛಕ್ತಿ, ಗಣಿ ಹಾಗೂ ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಇನ್ನೂ ಎಷ್ಟು ನೀರಾವರಿ ಭಾವಿ ಹಾಗೂ ನೀರಾವರಿ ಕೊಳವೆ ಭಾವಿಗಳ ಪಂಪ್ ಸೆಟ್ಟುಗಳಿಗೆ ವಿದ್ಯುತ್ತನ್ನು ಕೊಡುವುದು ಬಾಕಿ ಇದೆ.